## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

## ಸಿ.ಸಿ. ನಂ. 611/13

ಸಿ.ಡಬ್ಲ್ಯು 14

ಪಿ.ಡಬ್ಲ್ಯು 13

| | | |
|---|---|---|
| ಸಾಕ್ಷಿದಾರರ ಹೆಸರು | – | ಗಂಗಾಧರ ಹೊಂಗಲ್ |
| ತಂದೆಯ ಹೆಸರು | – | ಯಲ್ಲಪ್ಪಾ ಹೊಂಗಲ್ |
| ವಯಸ್ಸು | – | 47 ವರ್ಷ |
| ಉದ್ಯೋಗ | – | ಮುಖ್ಯಪೇದೆ, ಸಿದ್ದಾಪುರ ಪೊಲೀಸ್ ಠಾಣೆ |
| ವಾಸ್ತವ್ಯ | – | ಸಿದ್ದಾಪುರ |

(ಇಂದು ದಿನಾಂಕ 16-01-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು 2011 ರಿಂದ 2017 ರ ವರೆಗೆ ಕುಮಟಾ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯನಿರ್ವಹಿಸಿರುತ್ತೇನೆ.

ದಿನಾಂಕಃ 25-02-2013 ರಂದು ಚಾ.ಸಾ.17 ರವರು ಸಿಂಡಿಕೇಟ್ ಬ್ಯಾಂಕ್‌ನಿಂದ ಚಕ್‌ನ್ನು ಜಪ್ತುಪಡಿಸಿಕೊಂಡು ಬರುವಂತೆ ನನಗೆ ನಿರ್ದೇಶನ ನೀಡಿದ ಮೇರೆಗೆ ನಾನು ಚಾ.ಸಾ.15 ರವರೊಂದಿಗೆ ಸಿಂಡಿಕೇಟ್ ಬ್ಯಾಂಕ್‌ಗೆ ಭೇಟಿ ನೀಡಿದ್ದು, ಸ್ಥಳಕ್ಕೆ ಚಾ.ಸಾ. 6 ಮತ್ತು 7 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಸಿಂಡಿಕೇಟ್ ಬ್ಯಾಂಕ್‌ನ ಆಗಿನ ವ್ಯವಸ್ಥಾಪಕರಾದ ಚಾ.ಸಾ.12 ರವರು ಚಕ್‌ನ್ನು ಹಾಜರುಪಡಿಸಿದ ಮೇರೆಗೆ ಬೆಳಿಗ್ಗೆ 11.30 ರಿಂದ 12.30 ಗಂಟೆಯವರೆಗೆ ಜರುಗಿಸಲಾದ ಪಂಚನಾಮೆಯ ಮೂಲಕ ಅದನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿ.ಪಿ. 6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ನಾನು ವಶಕ್ಕೆ ಪಡೆದಂತಹ ಚಕ್ ಸಂಖ್ಯೆ 413610

ಆಗಿರುತ್ತದೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಚೆಕ್‌ನ್ನು ಈಗಾಗಲೇ ನಿ.ಪಿ.4 ಎಂದು ಗುರುತಿಸಲಾಗಿರುತ್ತದೆ.

ನಂತರ ಅದೇ ದಿನ ಅಂದರೆ ದಿನಾಂಕಃ 25-02-2013 ರಂದು ನಾನು ಚಾ.ಸಾ.15 ರವರೊಂದಿಗೆ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ಗೆ ಭೇಟಿ ನೀಡಿದ್ದು, ಸ್ಥಳಕ್ಕೆ ಚಾ.ಸಾ. 6 ಮತ್ತು 7 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನ ಆಗಿನ ವ್ಯವಸ್ಥಾಪಕರಾದ ಚಾ.ಸಾ.13 ರವರು ಚೆಕ್‌ನ್ನು ಹಾಜರುಪಡಿಸಿದ ಮೇರೆಗೆ ಮಧ್ಯಾಹ್ನ 12.35 ರಿಂದ 1.15 ಗಂಟೆಯವರೆಗೆ ಜರುಗಿಸಲಾದ ಪಂಚನಾಮೆಯ ಮೂಲಕ ಅದನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿ.ಪಿ. 7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.7(ಸಿ) ಎಂದು ಗುರುತಿಸಲಾಯಿತು. ನಾನು ವಶಕ್ಕೆ ಪಡೆದಂತಹ ಚೆಕ್ ಸಂಖ್ಯೆ 992991 ಆಗಿರುತ್ತದೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ಚೆಕ್‌ನ್ನು ಈಗಾಗಲೇ ನಿ.ಪಿ.5 ಎಂದು ಗುರುತಿಸಲಾಗಿರುತ್ತದೆ.

ನಂತರ ಪಂಚನಾಮೆ ಮತ್ತು ಅಮಾನತ್ತುಪಡಿಸಿಕೊಂಡಂತಹ ಚೆಕ್‌ಗಳನ್ನು ತನಿಖಾಧಿಕಾರಿಗಳ ಸಮಕ್ಷಮ ಹಾಜರುಪಡಿಸಿರುತ್ತೇನೆ. ಸದರಿ ವಿಚಾರವಾಗಿ ನಾನು ತನಿಖಾಧಿಕಾರಿಗಳ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ.

ನಂತರ ಪ್ರಸ್ತುತ ಪ್ರಕರಣದಲ್ಲಿನ ಆರೋಪಿತರ ಪತ್ತೆಗಾಗಿ ನನ್ನನ್ನು ಮತ್ತು ಚಾ.ಸಾ. 16 ರವರನ್ನು ನೇಮಕ ಮಾಡಿದ್ದು, ಆರೋಪಿತರ ಪೈಕಿ 1 ನೇ ಆರೋಪಿಯು ಕವಲಕ್ಕಿ ಗ್ರಾಮದಲ್ಲಿ ಇರುವುದಾಗಿ ಬಾತ್ಮಿ ಬಂದಿದ್ದು, ನಾನು ಮತ್ತು ಚಾ.ಸಾ.16 ರವರು 1 ನೇ ಆರೋಪಿಯನ್ನು ಠಾಣೆಗೆ ಕರೆತಂದು ಹಾಜರುಪಡಿಸಿರುತ್ತೇವೆ. 2 ನೇ ಆರೋಪಿಯು ಕತಗಾಲದ ಬಸ್ ನಿಲ್ದಾಣದ ಬಳಿ ದೊರೆತಿದ್ದು, ಆತನನ್ನು ನಾನು ಮತ್ತು ನನ್ನೊಂದಿಗೆ ನಿಯೋಜನೆಗೊಂಡಿದ್ದ ಸಿಬ್ಬಂದಿಯಾದ ಚಾ.ಸಾ.15 ರವರು ಆತನನ್ನು

ಹಿಡಿದು ತನಿಖಾಧಿಕಾರಿಗಳ ಸಮಕ್ಷಮ ಹಾಜರುಪಡಿಸಿರುತ್ತೇವೆ. ಸದರಿ ವಿಚಾರವಾಗಿ ನಾನು ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಇತರ ಸಿಬ್ಬಂದಿಯೊಂದಿಗೆ ಹಿಡಿದಂತಹ 1 ಮತ್ತು 2 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಹಾಜರು ಇರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಡಿ.ಆರ್. ವಕೀಲರಿಂದಃ**

ನಾನು ಪಂಚನಾಮೆಯನ್ನು ಜರುಗಿಸಿದ ದಿನಾಂಕದಂದು ಕರ್ತವ್ಯಕ್ಕೆ ಬೆಳಿಗ್ಗೆ 8.00 ಗಂಟೆಗೆ ಹಾಜರು ಇರುತ್ತೇನೆ. ನಾನು ನನಗೆ ನಿಯೋಜಿಸಿದ ಕರ್ತವ್ಯವನ್ನು ಮಾಡಿ, ಠಾಣೆಗೆ ಮಧ್ಯಾಹ್ನ 1.30 ಗಂಟೆಗೆ ಹಾಜರಾಗಿರುತ್ತೇನೆ. ನಾನು ಪಂಚನಾಮೆಯನ್ನು ಜರುಗಿಸಿದ ದಿನಾಂಕದಂದು ಠಾಣೆಯಿಂದ ಹೊರಟಾಗ ಬೆಳಿಗ್ಗೆ 11.00 ಗಂಟೆಯಾಗಿತ್ತು. ನಾನು ಠಾಣೆಯಿಂದ ಹೊರಟಾಗ ನನ್ನೊಂದಿಗೆ ಚಾ.ಸಾ.15 ರವರು ಇದ್ದರು. ನಾನು ಚಾ.ಸಾ.15 ರವರಿಗೆ ಸೇರಿದ ವಾಹನದಲ್ಲಿ ಹೋಗಿದ್ದು, ಅದರ ಸಂಖ್ಯೆ ಹೇಳಲು ಆಗುವುದಿಲ್ಲ.

ಪಂಚರನ್ನು ನಾನೇ ಬರಮಾಡಿಕೊಂಡಿರುತ್ತೇನೆ. ನಾನು ಪಂಚರಿಗೆ ಕರೆ ಮಾಡಿ ಬ್ಯಾಂಕ್‌ನ ಬಳಿ ಬರುವಂತೆ ತಿಳಿಸಿದ್ದೆನು. ಪಂಚರ ದೂರವಾಣಿ ಸಂಖ್ಯೆಯನ್ನು ಈಗ ಹೇಳಲು ಆಗುವುದಿಲ್ಲ. ನಾನು ಪಂಚರಿಗೆ ಬೆಳಿಗ್ಗೆ 1.45 ಗಂಟೆ ಸುಮಾರಿಗೆ ಕರೆ ಮಾಡಿರಬಹುದು. ನಾನು ಪಂಚರ ದೂರವಾಣಿ ಸಂಖ್ಯೆಯನ್ನು ಮತ್ತೊಬ್ಬ ಸಿಬ್ಬಂದಿಯ ಮೂಲಕ ಪಡೆದುಕೊಂಡಿರುತ್ತೇನೆ. ನನಗೆ ಸುಮಾರು ಒಂದು ವರ್ಷಗಳಿಂದ ಪಂಚರ ಪರಿಚಯ ಇತ್ತು. ಪಂಚರು ಚಿತ್ರಗಿಯ ನಿವಾಸಿಗಳು. ಚಿತ್ರಗಿಯಿಂದ ನಮ್ಮ ಪೊಲೀಸ್ ಠಾಣೆ, ಸಿಂಡಿಕೇಟ್ ಬ್ಯಾಂಕ್ ಮತ್ತು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಸುಮಾರು 3 ಕಿಲೋ ಮೀಟರ ಅಂತರದ ಒಳಗೆ ಇದೆ. ಪಂಚರು ಇಬ್ಬರು ಒಂದೇ ವಾಹನದಲ್ಲಿ ಬಂದಿದ್ದು, ಅದರ ಸಂಖ್ಯೆ

ಹೇಳಲು ಆಗುವುದಿಲ್ಲ. ಕುಮಟಾದ ಸಿಂಡಿಕೇಟ್ ಬ್ಯಾಂಕ್ ಮತ್ತು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಇರುವ ಪ್ರದೇಶ ಜನಸಂದಣಿಯಿಂದ ಕೂಡಿರುತ್ತದೆ ಎಂದರೆ ಸರಿ.

ಸಿಂಡಿಕೇಟ್ ಬ್ಯಾಂಕ್ ಮತ್ತು ಕರ್ನಾಟಕ ಬ್ಯಾಂಕ್‌ನ ಕಟ್ಟಡ ಸಂಖ್ಯೆಯನ್ನು ಪರಿಶೀಲಿಸಿ ಪಂಚನಾಮೆಯಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ನಿ.ಪಿ.4 ಮತ್ತು 5 ರಲ್ಲಿ ಏನು ಬರೆಯಲಾಗಿತ್ತು ಎಂಬುದನ್ನು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ನಿ.ಪಿ.4 ಯಾವ ಖಾತೆ ಸಂಖ್ಯೆಗೆ ಸಂಬಂಧಪಟ್ಟದ್ದಾಗಿತ್ತು ಎಂದು ಈಗ ಹೇಳಲು ನೆನಪಿಲ್ಲ, ಅದನ್ನು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ.

ನಾನು ಅಮಾನತ್ತುಪಡಿಸಿಕೊಂಡಂತಹ 2 ಚಕ್‌ಗಳನ್ನು ಸಂಬಂಧಪಟ್ಟ ಮ್ಯಾನೇಜರಗಳು ತಮ್ಮ ಬಳಿಯಿಂದ ಹಾಜರುಪಡಿಸಿರುತ್ತಾರೆ. ನಾನು ಬ್ಯಾಂಕ್‌ಗೆ ಹೋಗುವ ಪೂರ್ವದಲ್ಲಿ ಸಂಬಂಧಪಟ್ಟ ವ್ಯವಸ್ಥಾಪಕರಿಗೆ ತಿಳುವಳಿಕೆ ಪತ್ರ ನೀಡಿರುವುದಿಲ್ಲ. ನಾನು ಸಂಬಂಧಪಟ್ಟ ವ್ಯವಸ್ಥಾಪಕರನ್ನು ಪಂಚನಾಮೆಯ ಸಂದರ್ಭದಲ್ಲಿ ವಿಚಾರಣೆ ಮಾಡಿರುವುದಿಲ್ಲ. ವ್ಯವಸ್ಥಾಪಕರು ತಮ್ಮ ಸಿಬ್ಬಂದಿಯವರ ಮೂಲಕ ಚಕ್‌ಗಳನ್ನು ತರಿಸಿಕೊಂಡಿರುತ್ತಾರೆ. ಸದರಿ ವಿಚಾರವನ್ನು ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ. ಸದರಿ ವಿಚಾರವನ್ನು ಪಂಚನಾಮೆಯಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ಸಿಬ್ಬಂದಿಯವರು ಚಕ್‌ನ್ನು ಎಲ್ಲಿಂದ ತಂದರು ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ಸಿಬ್ಬಂದಿಯವರು ಚಕ್ ತಂದು ಕೊಟ್ಟ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ.

ಪಂಚನಾಮೆಗಳನ್ನು ಸ್ವತಃ ನಾನೇ ಬರೆದಿರುತ್ತೇನೆ. ಸಿಬ್ಬಂದಿಯವರು 1 ರಿಂದ 2 ನಿಮಿಷಗಳ ಅವಧಿಯೊಳಗೆ ಚಕ್‌ನ್ನು ತಂದಿರುತ್ತಾರೆ. ನಿ.ಪಿ.4 ಮತ್ತು 5 ರ ಹಿಂಭಾಗದಲ್ಲಿ ಯಾವ ರೀತಿಯ ಬರವಣಿಗೆ ಆಗಿದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಿ.ಪಿ.4 ಮತ್ತು 5 ರ ಮೇಲ್ಭಾಗದಲ್ಲಿ ಸಂಬಂಧಪಟ್ಟ ಬ್ಯಾಂಕ್‌ಗಳ ಸೀಲ್ ಇತ್ತು.

ಠಾಣೆಯಿಂದ ಸಿಂಡಿಕೇಟ್ ಬ್ಯಾಂಕ್‌ಗೆ ಹೋಗಲು ಸುಮಾರು 6 ರಿಂದ 7 ನಿಮಿಷಗಳು ಆಗಿರುತ್ತದೆ. ನಾವು ಬ್ಯಾಂಕ್‌ಗೆ ತಲುಪಿದಾಗ ಪಂಚರು ಬಂದಿರಲಿಲ್ಲ. ನಾನು ಸ್ಥಳಕ್ಕೆ ಹೋದ ನಂತರ ಪಂಚರಿಗೆ ಕರೆ ಮಾಡಿರುತ್ತೇನೆ. ನಾನು ಕರೆ ಮಾಡಿದ ಸಂದರ್ಭದಲ್ಲಿ ಪಂಚರು ಬರುತ್ತಿರುವುದಾಗಿ ತಿಳಿಸಿರುತ್ತಾರೆ. ಪಂಚರು ಬೆಳಿಗ್ಗೆ ಸುಮಾರು 11.15 ರಿಂದ 11.20 ಗಂಟೆ ಸಮಯಕ್ಕೆ ಬಂದಿರಬಹುದು.

ನಾನು ಮತ್ತು ಚಾ.ಸಾ.16 ರವರು 1 ನೇ ಆರೋಪಿಯ ಪತ್ತೆಗಾಗಿ ಕಾರಿನಲ್ಲಿ ಹೋಗಿರುತ್ತೇವೆ. ಸದರಿ ಕಾರಿನ ಸಂಖ್ಯೆ ಮತ್ತು ಚಾಲಕನ ಹೆಸರು ನೆನಪಿಲ್ಲ. 2 ನೇ ಆರೋಪಿಯ ಪತ್ತೆಗಾಗಿ ನಾನು ಚಾ.ಸಾ.15 ರವರ ವಾಹನದಲ್ಲಿ ಹೋಗಿದ್ದು, ಅದರ ಸಂಖ್ಯೆ ನನಗೆ ನೆನಪಿಲ್ಲ. ಆರೋಪಿಯು ಕತಗಾಲದ ಬಸ್ ನಿಲ್ದಾಣದ ಬಳಿ ನಿಂತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ನನಗೆ ಮಾಹಿತಿಯು ದೂರವಾಣಿ ಮೂಲಕ ಬಂದಿರುತ್ತದೆ. ಕತಗಾಲದಲ್ಲಿ ನಮ್ಮ ಪೊಲೀಸ್ ಇಲಾಖೆಯ ಉಪಠಾಣೆ ಇದೆ ಎಂದರೆ ಸರಿ. ನನಗೆ ಬಂದ ಮಾಹಿತಿಯನ್ನು ನಾನು ಉಪಠಾಣೆಗೆ ತಿಳಿಸಿರುವುದಿಲ್ಲ. ನಾನು ಹೇಳಿಕೆಯನ್ನು ಅದೇ ದಿನದಂದು ನೀಡಿರುತ್ತೇನೆ.

ನಾನು ಯಾವುದೇ ಬ್ಯಾಂಕ್‌ಗೆ ಭೇಟಿ ನೀಡಿರುವುದಿಲ್ಲ ಹಾಗೂ ಚಕ್‌ಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ಮತ್ತು 2 ನೇ ಆರೋಪಿತರನ್ನು ಹಿಡಿದು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಪೂರಕವಾಗುವ ರೀತಿಯಲ್ಲಿ ಸೃಷ್ಟಿಸಲಾದ ದಾಖಲಾತಿಗಳಿಗೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಚಕ್‌ಗಳನ್ನು ಬ್ಯಾಂಕ್‌ನಿಂದ ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾದಂ. ಕುಮಟಾ